ಇನ್ನಷ್ಟು ಸೂಕ್ಷ್ಮಸಂವೇದಿಗಳಾಗುತ್ತೇವೆ. ಇವೆಲ್ಲಾ ಈಸ್ತೆಟಿಕ್ ಪ್ರಶ್ನೆಗಳೂ ಹೌದು, ರಾಜಕೀಯ ಪ್ರಶ್ನೆಗಳೂ ಹೌದು, ಹಾಗೆಯೇ ಸಾಮಾಜಿಕ ಪ್ರಶ್ನೆಗಳೂ ಆಗಿದ್ದವು."

ಹಾಗಾದರೆ ಕರ್ನಾಟಕ ಸಂಗೀತವನ್ನು ಎಲ್ಲಾ ಸಂಕೋಲೆಗಳಿಂದ ಮುಕ್ತಗೊಳಿಸಿ ಎಲ್ಲರಿಗೂ ತಲುಪಿಸುವುದಕ್ಕೆ ಕೃಷ್ಣ ಹೊರಟಿದ್ದಾರಾ ಅಂದರೆ– "ಬಹುಶಃ ಆರಂಭದಲ್ಲಿ ನನ್ನ ಮನಸ್ಸಿನಲ್ಲಿ ಅಂತಹ ಉದ್ದೇಶ ಇತ್ತೇನೋ, ನನಗೆ ಗೊತ್ತಿಲ್ಲ. ಆದರೆ ಎಲ್ಲರಿಗೂ ಕರ್ನಾಟಕ ಸಂಗೀತ ಬೇಕಿಲ್ಲ ಎಂದು ಅನಂತರದಲ್ಲಿ ಅರಿವಾಯಿತು. ಕರ್ನಾಟಕ ಸಂಗೀತವನ್ನು ಇಷ್ಟಪಡದೇ ಇರುವುದಕ್ಕೂ ಜನರಿಗೆ ಹಕ್ಕಿರಬೇಕು. ಆ ನಿರಾಕರಣೆಯನ್ನು ನಾನು ಗೌರವಿಸುತ್ತೇನೆ. ನಮ್ಮ ಸಮಸ್ಯೆಯೆಂದರೆ ನಾವು ನಿರಾಕರಣೆಯನ್ನು ಒಪ್ಪಿಕೊಳ್ಳಲು ತಯಾರಿಲ್ಲ. ನಿರಾಕರಣೆಯೇ ಸಾಧ್ಯವಿಲ್ಲದ, ನೆಮ್ಮದಿಯ ಪರಿಸರವನ್ನು ನಿರ್ಮಿಸಿಕೊಳ್ಳುತ್ತೇವೆ. ನಮ್ಮ ಸಂಗೀತವನ್ನು ಒಪ್ಪಿಕೊಳ್ಳುವವರೇ ನಮ್ಮ ಕಾರ್ಯಕ್ರಮಗಳಿಗೆ ಬರುತ್ತಾರೆ. ಬೇರೆಯವರು ಬರುವುದಿಲ್ಲ ಅಥವಾ ಅವರಿಗೆ ಅವಕಾಶವಿಲ್ಲ ಎನ್ನಬಹುದು. 'ಕಾಕಾ ಮುತ್ತಾ' ಎನ್ನುವ ತಮಿಳು ಸಿನಿಮಾದಲ್ಲಿ ಇಬ್ಬರು ಪುಟ್ಟ ಮಕ್ಕಳು ಸಿಟಿ ಸೆಂಟರ್‌ಗೆ ನಡೆದು ಬರುತ್ತಿರುವ ದೃಶ್ಯವಿದೆ. ಆಗ ತಮ್ಮ, "ಸಿಟಿ ಸೆಂಟರ್ ಎಲ್ಲಿದೆ," ಎಂದು ಕೇಳುತ್ತಾನೆ. "ಅದೋ ಅಲ್ಲಿದೆ," ಎಂದು ಅಣ್ಣ ತೋರಿಸುತ್ತಾನೆ. ಆಗ ತಮ್ಮ, "ಅವರು ನಮ್ಮನ್ನು ಅಲ್ಲಿಗೆ ಬಿಟ್ಟುಕೊಳ್ಳುತ್ತಾರೆ ಅನ್ನಿಸುತ್ತಾ?" ಎಂದು ಕೇಳುತ್ತಾನೆ. ಆ ದೃಶ್ಯ ನಮ್ಮ ಸಮಾಜದ ವಿನ್ಯಾಸವನ್ನು ವಿವರಿಸುತ್ತದೆ. ಸ್ಥಳ ಎನ್ನುವುದನ್ನೂ ತಲೆಕೆಳಗು ಮಾಡಬೇಕು."

ಹಾಗಾಗಿಯೇ ಕೃಷ್ಣ ಕರ್ನಾಟಕ ಸಂಗೀತವನ್ನು ಮೀನುಗಾರರ ಕಾಲೋನಿಯಲ್ಲಿ, ಚಲಿಸುವ ಬಸ್ಸಿನಲ್ಲಿ, ಮುನಿಸಿಪಲ್ ಶಾಲೆಗಳಲ್ಲಿ ಬೇರೆ ಸಂಗೀತಗಳ ಜೊತೆಯಲ್ಲಿ ಪ್ರಸ್ತುತಪಡಿಸುವ ಪ್ರಯೋಗಕ್ಕೆ ಕೈಹಾಕಿದರು.

"ನನ್ನ ಮನಸ್ಸಿನಲ್ಲಿ ಕರ್ನಾಟಕ ಸಂಗೀತ ಅಂದರೆ ಏನು ಎನ್ನುವುದೇ ತಿಳಿಯದಿದ್ದ ಜನಗಳ ನಡುವೆ, ಸಾರ್ವಜನಿಕ ಸ್ಥಳಗಳಲ್ಲಿ ಅದನ್ನು ಪ್ರಸ್ತುತಪಡಿಸಬೇಕೆಂಬ ಹಂಬಲವಿತ್ತು. ಬಸ್ಸಿನಲ್ಲಿ ಒಂದು ರಿಲೇ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಿದೆವು. ಪ್ರತಿ ಸ್ಟಾಪಿನಲ್ಲೂ ಒಬ್ಬೊಬ್ಬ ಸಂಗೀತಗಾರ ಸುಮಾರು 20 ನಿಮಿಷಗಳ ಕಾಲ ಹಾಡುತ್ತಾ ಹೋಗಬೇಕೆನ್ನುವುದು ನಮ್ಮ ಯೋಜನೆಯಾಗಿತ್ತು. ಅದು, ರ‍್ಯಾಂಕ್, ರಾಕ್, ರಾಮಸಂಕೀರ್ತನ, ಕರ್ನಾಟಕ ಸಂಗೀತ ಹೀಗೆ ಏನು ಬೇಕಾದರೂ ಆಗಬಹುದಿತ್ತು. ಏನಾಗುತ್ತಿದೆ ಎಂದು ನೋಡಲು ನಾನೂ ಒಂದು ಸ್ಟಾಪಿನಲ್ಲಿ ಬಸ್ಸು ಹತ್ತಿದೆ. ನನ್ನ ಎಳೆಯ ಗೆಳೆಯರು, "ಅಣ್ಣ ನೀವೂ ಒಂದು ಹಾಡು ಹಾಡಿ," ಎಂದರು. ನಾನು ಭಾರತಿಯಾರ್ ಅವರ ಹಾಡನ್ನು ಹಾಡಲಾರಂಭಿಸಿದೆ. ಅಲ್ಲಿ ಚೆನ್ನಾಗಿ ಕುಡಿದಿದ್ದ ವ್ಯಕ್ತಿಯೊಬ್ಬ ನರ್ತಿಸಲು ಪ್ರಾರಂಭಿಸಿದ. ಅದು ನನ್ನ ಬದುಕಿನ ಅತ್ಯಂತ ಸುಂದರವಾದ ಕ್ಷಣ. ನಿಜ ಹೇಳಬೇಕೆಂದರೆ ನಾನು ತುಂಬಾ ಹೆದರಿದ್ದೆ. ಹಾಡುವುದಕ್ಕೆ ನಾನು ಎಂದೂ ಭಯಪಟ್ಟವನಲ್ಲ. ಆದರೆ ಅಂದು ಹೆದರಿದ್ದೆ. ನಾನು ತಿರಸ್ಕಾರಕ್ಕೆ, ನಿರಾಕರಣೆಗೆ ಹೆದರಿದ್ದೆ. ನಾನು ಯಾವ ನಾದ, ಯಾವ ಧ್ವನಿಯನ್ನು ಪ್ರತಿನಿಧಿಸುತ್ತಿದ್ದೇನೋ ಅದನ್ನು ಸಾಂಸ್ಕೃತಿಕವಾಗಿ ತಿರಸ್ಕರಿಸಬಹುದು ಎನ್ನುವ ಗಾಬರಿಯಲ್ಲಿದ್ದೆ. ನಾನು ಹೇಗೆ ಹಾಡಬೇಕು, ಬೇರೆ ರೀತಿಯಲ್ಲಿ ಹಾಡಬೇಕೇ, ಎಂಬ ಒದ್ದಾಟದಲ್ಲಿದ್ದೆ. ಇಬ್ಬರು ಚಿಕ್ಕಹುಡುಗರು ನನ್ನ ಮುಂದಿನ ಸೀಟಿನಲ್ಲಿ ಬೆರಳಿನಿಂದ ಕಿವಿ ಮುಚ್ಚಿಕೊಂಡು ಕುಳಿತಿದ್ದರು. ಅದೂ ಕೂಡ ನನಗೆ ತುಂಬಾ ಒಳ್ಳೆಯ ಅನುಭವವೇ. ನಾವು ವಿಭಿನ್ನ ಸ್ಥಳಗಳಿಗೆ ಹೋಗಬೇಕು ಮತ್ತು ವಿಭಿನ್ನ ಕಲಾಪ್ರಕಾರಗಳೊಡನೆ – ಪರೈಯಾಟ್ಟಂ, ತೈಯ್ಯಂ ಅಥವಾ ಅಂತಹ ಇನ್ನಾವುದೋ ಇರಬಹುದು – ಸಂವಾದ ಮಾಡಬೇಕು. ಆದರೆ ಸಂವಾದಕ್ಕೆ ಶಾಸ್ತ್ರೀಯ ಲೋಕದಲ್ಲಿ ಸ್ಥಳವೆಲ್ಲಿದೆ? ನೀವು ಮ್ಯೂಸಿಕ್ ಅಕಾಡೆಮಿಯಲ್ಲಿ ಕೊಡಿಯಾಟ್ಟಂ ಮಾಡಿದರೆ ಅಕಾಡೆಮಿಯ ಸದಸ್ಯರು ಬರುತ್ತಾರೆಯೇ? ಖಂಡಿತಾ ಇಲ್ಲ."